# ಕರ್ನಾಟಕ ವಿಧಾನ ಪರಿಷತ್ತು


| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 599 |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರೇಟರ್ ಬೆಂಗಳೂರು ಪ್ರಾಧಿಕಾರ GPA ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಹೆಚ್ಚುವರಿ ತೆರಿಗೆ ನೋಟಿಸ್‌ಗಳನ್ನು ನೀಡಲಾಗುತ್ತಿದೆಯೇ; ಹೊಸ ವ್ಯವಸ್ಥೆಯಿಂದ ನಾಗರಿಕರ ಮೇಲೆ ತೆರಿಗೆ ಹೊರೆ ಹೆಚ್ಚಾಗಲಿದೆಯೇ; (ಮಾಹಿತಿ ನೀಡುವುದು) | ಗ್ರೇಟರ್ ಬೆಂಗಳೂರು ಪ್ರಾಧಿಕಾರ (GBA) ವ್ಯಾಪ್ತಿಯಲ್ಲಿ ಯಾವುದೇ ಹೊಸ ತೆರಿಗೆ ವ್ಯವಸ್ಥೆ ಅಥವಾ ಹೊಸ ತೆರಿಗೆ ವಿಧಿಸುವ ಕ್ರಮವನ್ನು ಜಾರಿಗೆ ತಂದಿರುವುದಿಲ್ಲ. ತೆರಿಗೆ ಮೌಲ್ಯಮಾಪನ, ಪರಿಶೀಲನೆ, ಮರುಮೌಲ್ಯಮಾಪನ ಹಾಗೂ ವ್ಯತ್ಯಾಸ ಕಂಡುಬಂದಲ್ಲಿ ಹೆಚ್ಚುವರಿ ತೆರಿಗೆ ಬೇಡಿಕೆಯನ್ನು ವಿಧಿಸುವ ಪ್ರಕ್ರಿಯೆಗಳು ಕಳೆದ 20–25 ವರ್ಷಗಳಿಂದಲೂ ಜಾರಿಯಲ್ಲಿರುವ ಶಾಸನಬದ್ಧ (Statutory) ವ್ಯವಸ್ಥೆಯ ಭಾಗವಾಗಿವೆ.<br><br>ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ, 2024ರ ಕಲಂ 150 ಹಾಗೂ ಸಂಬಂಧಿತ ನಿಯಮಗಳನ್ವಯ, ತೆರಿಗೆದಾರರು ಸಲ್ಲಿಸಿರುವ ಆಸ್ತಿ ತೆರಿಗೆ ವಿವರಗಳನ್ನು (Property Tax Returns) ಪರಿಶೀಲಿಸಲಾಗುತ್ತದೆ. ಪರಿಶೀಲನೆಯ ಸಂದರ್ಭದಲ್ಲಿ ತೆರಿಗೆ ಮೌಲ್ಯಮಾಪನದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಮಾತ್ರ ನಿಯಮಾನುಸಾರ ಮರುಮೌಲ್ಯಮಾಪನ (Reassessment) ಕೈಗೊಳ್ಳಲಾಗುತ್ತದೆ.<br><br>ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಆಸ್ತಿ ಮಾಲೀಕರಿಗೆ ಮೊದಲು ಕಾರಣ ಕೇಳುವ ನೋಟಿಸ್ (Show Cause Notice) ಜಾರಿಗೊಳಿಸಿ, ತಮ್ಮ ಆಕ್ಷೇಪಣೆ/ವಿವರಣೆಯನ್ನು ಸಲ್ಲಿಸಲು ಸೂಕ್ತ ಅವಕಾಶ ನೀಡಲಾಗುತ್ತದೆ. ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರವೇ, ನಿಯಮಾನುಸಾರ ಅಗತ್ಯವಿದ್ದಲ್ಲಿ ಬೇಡಿಕೆ ನೋಟಿಸ್ (Demand Notice) ಹೊರಡಿಸಿ, ಬಾಕಿ ಮೊತ್ತದ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತದೆ.<br><br>ಆದ್ದರಿಂದ, ಹೊಸ ವ್ಯವಸ್ಥೆಯಿಂದ ನಾಗರಿಕರ ಮೇಲೆ ಯಾವುದೇ ಹೆಚ್ಚುವರಿ ತೆರಿಗೆ ಹೊರೆ ವಿಧಿಸಲಾಗುತ್ತಿಲ್ಲ. ಪರಿಶೀಲನೆ ಅಥವಾ ಮರುಮೌಲ್ಯಮಾಪನದ ಸಂದರ್ಭದಲ್ಲಿ ಕಂಡುಬರುವ ವ್ಯತ್ಯಾಸಕ್ಕೆ ಅನುಗುಣವಾಗಿ ತೆರಿಗೆ ಬೇಡಿಕೆಯನ್ನು ನಿಗದಿಪಡಿಸುವುದು ಹೊಸ ತೆರಿಗೆ ವಿಧಿಸುವ ಕ್ರಮವಲ್ಲ; ಬದಲಾಗಿ, ಈಗಾಗಲೇ ಜಾರಿಯಲ್ಲಿರುವ ಕಾಯ್ದೆ ಮತ್ತು ನಿಯಮಗಳಲ್ಲಿ ನಿಗದಿಪಡಿಸಿರುವ ಶಾಸನಬದ್ಧ ತೆರಿಗೆ ಮೌಲ್ಯಮಾಪನ ಮತ್ತು ವಸೂಲಾತಿ ಪ್ರಕ್ರಿಯೆಯ ಅನುಷ್ಠಾನ ಮಾತ್ರವಾಗಿದೆ. |
| ಆ) | ಇ-ಖಾತಾ ವಿತರಣೆಯಲ್ಲಿ ಎದುರಾಗುತ್ತಿರುವ ತಾಂತ್ರಿಕ ದೋಷಗಳು ಮತ್ತು ಸಾರ್ವಜನಿಕರ ಅಲೆದಾಟವನ್ನು ತಪ್ಪಿಸಲು ಪ್ರಾಧಿಕಾರ ತೆಗೆದುಕೊಂಡಿರುವ ಕ್ರಮಗಳೇನು; | ಇ-ಖಾತಾ ವ್ಯವಸ್ಥೆಯಲ್ಲಿ ಉಂಟಾಗಬಹುದಾದ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ನಾಗರಿಕರಿಗಾಗಿ ವಿವಿಧ ನೆರವು ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ನಾಗರಿಕರು ಸಹಾಯ (Sahaaya) ಪೋರ್ಟಲ್, ಇ-ಖಾತಾ ಸಹಾಯವಾಣಿ ಸಂಖ್ಯೆ 94806 83695 ಹಾಗೂ ಕಾಲ್ ಸೆಂಟರ್ ಸಂಖ್ಯೆ:1533 ಮೂಲಕ ತಮ್ಮ ದೂರುಗಳನ್ನು ದಾಖಲಿಸಬಹುದಾಗಿದೆ. ತಾಂತ್ರಿಕ ಸಮಸ್ಯೆಗಳ ನಿವಾರಣೆಗಾಗಿ ಕಚೇರಿಗಳಿಗೆ ಅನಗತ್ಯವಾಗಿ ಭೇಟಿ ನೀಡುವ ಅವಶ್ಯಕತೆ ಇಲ್ಲ. ಸ್ವೀಕರಿಸಲಾದ ದೂರುಗಳನ್ನು ತಾಂತ್ರಿಕ ತಂಡವು ಪ್ರತಿದಿನ ಪರಿಶೀಲಿಸಿ, ಆದ್ಯತೆಯ ಮೇರೆಗೆ ಪರಿಹರಿಸುತ್ತಿದೆ. |

.2...

| | | |
|---|---|---|
| ಇ) | ಹೊಸ ಬಡಾವಣೆಗಳಲ್ಲಿ ನಿವೇಶನ ಪಡೆದ ನಾಗರಿಕರಿಗೆ ರಸ್ತೆ, ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವಲ್ಲಿ ಉಂಟಾಗುತ್ತಿರುವ ವಿಳಂಬಕ್ಕೆ ಯಾರು ಹೊಣೆ; ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ 110 ಗ್ರಾಮಗಳನ್ನು ಒಳಗೊಂಡಂತೆ, ಬೆಂಗಳೂರು ಜಲಮಂಡಳಿಯಿಂದ ಈಗಾಗಲೇ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br><br>ಇದಲ್ಲದೆ, ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ದುರಸ್ತಿ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿದ್ದು, ಹಂತ-ಹಂತವಾಗಿ ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸದರಿ ಪ್ರದೇಶಗಳಲ್ಲಿ ಅಗತ್ಯ ಮೂಲ ಸೌಕರ್ಯವನ್ನು ಕಲ್ಪಿಸಿರುವ ಹಿನ್ನೆಲೆಯಲ್ಲಿ, ಕುಡಿಯುವ ನೀರು ಮತ್ತು ಒಳಚರಂಡಿ ಸಂಪರ್ಕಕ್ಕಾಗಿ ನಾಗರಿಕರಿಂದ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಜಲಮಂಡಳಿಯ ಚಾಲ್ತಿಯಲ್ಲಿರುವ ನಿಯಮಗಳು ಹಾಗೂ ಕಾರ್ಯ ವಿಧಾನದನ್ವಯ ಪರಿಶೀಲಿಸಿ, ಸಂಪರ್ಕ ಮಂಜೂರು ಮಾಡಲಾಗುತ್ತಿದೆ. |
| ಈ) | ಮಳೆಗಾಲದಲ್ಲಿ ತಗ್ಗು ಪ್ರದೇಶಗಳು ಮತ್ತು ಐಟಿ ಕಾರಿಡಾರ್‌ಗಳಲ್ಲಿ ನೀರು ನಿಲ್ಲದಂತೆ ತಡೆಯಲು ಪ್ರಾಧಿಕಾರವು ಕೈಗೊಂಡಿರುವ ತುರ್ತು ಕ್ರಮಗಳೇನು; ಗಾಳಿ ಮಳೆಗೆ ಮರಗಳು ಬಿದ್ದು ಸಾರ್ವಜನಿಕರ ಪ್ರಾಣ ಹಾನಿ ಮತ್ತು ಆಸ್ತಿಪಾಸ್ತಿ ನಷ್ಟವಾಗುತ್ತಿರುವುದನ್ನು ತಡೆಯಲು ಅರಣ್ಯ ವಿಭಾಗದೊಂದಿಗೆ ಪ್ರಾಧಿಕಾರ ಮಾಡಿಕೊಂಡಿರುವ ಸಮನ್ವಯತೆ ಏನು? | ಅತೀ ಸೂಕ್ಷ್ಮ ಮಳೆ ನೀರು ನಿಲ್ಲುವ ಪ್ರದೇಶಗಳನ್ನು ಗುರುತಿಸಿ ನೀರು ನಿಲ್ಲದಂತೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮಳೆ ನೀರುಕಾಲುವೆಗಳಲ್ಲಿ ಕಸ ಹಾಗೂ ಹೂಳನ್ನು ತೆಗೆದು ಮಳೆ ನೀರು ಸರಾಗವಾಗಿ ಹರಿಯುವಂತೆ ಕ್ರಮವಹಿಸಲಾಗುತ್ತಿದೆ. ಮಳೆಗಾಲದ ತುರ್ತು ನಿಯಂತ್ರಣ ಕೊಠಡಿಗಳನ್ನು ಉಪ ವಿಭಾಗವಾರು ಸ್ಥಾಪಿಸಲಾಗಿದ್ದು, ಗಸ್ತು ವಾಹನಗಳನ್ನು ಸಹ ಬಳಸಿಕೊಂಡು ಮಳೆ ಸುರಿಯುತ್ತಿರುವ ಪ್ರದೇಶಗಳನ್ನು ಅವಲೋಕನ ಮಾಡುತ್ತಿದ್ದು, ತುರ್ತು ಪರಿಸ್ಥಿತಿಗಳನ್ನು ನಿಯಂತ್ರಿಸಲಾಗುತ್ತಿದೆ.<br><br>ಈಗಾಗಲೇ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಗುತ್ತಿಗೆ ಆಧಾರದಲ್ಲಿ 30 ಮರಗಳ ವ್ಯವಸ್ಥಿತ ನಿರ್ವಹಣಾ ತಂಡಗಳನ್ನು ರಚಿಸಲಾಗಿದೆ. ಇದರ ಜೊತೆಗೆ 25 ಕ್ಷಿಪ್ರ ಕಾರ್ಯಾಚರಣೆ ಪಡೆಗಳನ್ನು ರಚಿಸಲಾಗಿದ್ದು ಹಾಗೂ 11 ರಾತ್ರಿ ಪಾಳಿಯ ಮರಗಳ ವ್ಯವಸ್ಥಿತ ನಿರ್ವಹಣಾ ತಂಡಗಳನ್ನು ರಚಿಸಲಾಗಿದೆ.<br><br>ಸದರಿ ತಂಡಗಳು ಅಪಾಯಕಾರಿ ಮರಗಳನ್ನು ಹಾಗೂ ಕೊಂಬೆಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಆಗಿಂದಾಗ್ಗೆ ವ್ಯವಸ್ಥಿತವಾಗಿ ಮಾಡುತ್ತಿದ್ದು, ಪ್ರಾಣಹಾನಿ ಹಾಗೂ ಆಸ್ತಿಪಾಸ್ತಿ ನಷ್ಟವನ್ನು ತಡೆಯಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. ಇದಲ್ಲದೆ ಅಪಾಯಕಾರಿ ಮರಗಳು ಹಾಗೂ ರೆಂಬೆ ಕೊಂಬೆಗಳ ತೆರವು ಕಾರ್ಯಾಚರಣೆಯಲ್ಲಿ 18 ಕ್ರೇನ್‌ಗಳನ್ನು ಸಹ ಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲಾಗುತ್ತಿರುತ್ತದೆ. |

**ನಅಇ 598 ಎಂಎಸ್‌ವೈ 2026 (ಇ)**



**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು